## ಝೀರೊ ಆದ ಹೀರೊ

ಝೀ ಕನ್ನಡದ 'ಜೊತೆ ಜೊತೆಯಲಿ' ಧಾರಾವಾಹಿ ಕುತೂಹಲಕರವಾಗಿ ಮೂಡಿ ಬರುತ್ತಿತ್ತು. ಧಾರಾವಾಹಿಗೆ ಆರ್ಯವರ್ಧನನ ಪಾತ್ರವೇ ಜೀವಾಳವಾಗಿತ್ತು. ಆ ಪಾತ್ರವನ್ನು ಅನಿರುದ್ಧ್ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಪಾತ್ರಕ್ಕೆ ಬೇಕಾದ ವ್ಯಕ್ತಿತ್ವ ಅವರಲ್ಲಿ ಇತ್ತು. ಅವರು ನಿರ್ಗಮಿಸಿದ ನಂತರ, ನಾಯಕ ಪಾತ್ರವನ್ನೇ ಸೊನ್ನೆ ಮಾಡಿ ಕಥೆ ತಿರುಚಿರುವುದು ನಿರಾಸೆಯನ್ನು ಮೂಡಿಸಿದೆ. ನಾಯಕ ಗುಣದ ಪಾತ್ರವಿಲ್ಲದೆ 'ಜೊತೆ ಜೊತೆಯಲಿ' ಇಲ್ಲವೇ ಇಲ್ಲ.

—ವಸಂತಿ ಪಾರಂಪಳ್ಳಿ, ಬೆಂಗಳೂರು

## ಮರುಪ್ರಸಾರ ಪ್ರಾರಂಭಿಸಿ

'ಸಿರಿ ಕನ್ನಡ' ಪ್ರತಿ ರಾತ್ರಿ 10.30ಕ್ಕೆ 'ಯುಗಾಂತರ'ದ ಹಿಂದಿನ ಸಂಚಿಕೆಯನ್ನು ಮರುಪ್ರಸಾರ ಮಾಡುತ್ತಿತ್ತು. ಕೆಲವು ದಿನಗಳಿಂದ ಆ ಸಮಯದಲ್ಲಿ ಬೇರೆ ಕಾರ್ಯಕ್ರಮ ಬಿತ್ತರಿಸುತ್ತಿದ್ದಾರೆ. ದಯವಿಟ್ಟು ಪುನಃ ಧಾರಾವಾಹಿ ಮರುಪ್ರಸಾರವನ್ನು ಪ್ರಾರಂಭಿಸಿ.

ಈ ಧಾರಾವಾಹಿಯಲ್ಲಿ ಶಾರದಾ ಪ್ರಸಾದ್ ಮಗಳು ಮತ್ತು ವರ್ಷಾ ನಡೆ–ನುಡಿ ಆಧುನಿಕವಾಗಿದೆ. ಅವರ ಪೋಷಾಕು ಮಾತ್ರ ಪುರಾತನ ಕಾಲದಂತೆ ಕಾಣಿಸುತ್ತದೆ. ಇದು ಸರಿ ಹೊಂದುವುದಿಲ್ಲ. ತಾರಾಗಣದಲ್ಲಿರುವ ಸೇತೂರಾಮ್, ಸುಧಾ ಬೆಳವಾಡಿ, ದಿವ್ಯಾ ಕಾರಂತರ ಮುಖ ಪರಿಚಯ ನಮಗಿದೆ. ಉಳಿದ ಹೊಸ ಮುಖಗಳ ಪರಿಚಯವನ್ನೂ ಮಾಡಿಸಿ.

—ಅರುಣ್ ಕೆ.ಎನ್., ಬೆಂಗಳೂರು

## ಹಾಸ್ಯಕ್ಕೂ ಮಿತಿ ಇರಲಿ

ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿ ರಾಮಾಚಾರಿ–ಚಾರು ಕೆಲಸ ಮಾಡುವ ಕಂಪನಿಯ ಮ್ಯಾನೇಜರ್‌ನನ್ನು ಬಫೂನಿನಂತೆ ಚಿತ್ರಿಸಲಾಗಿದೆ. ಆತ ತಮ್ಮ ಸಿಬ್ಬಂದಿಯಿಂದ ಕೆಲಸ ಮಾಡಿಸುವುದನ್ನು ಬಿಟ್ಟು ಸುತ್ತಲೂ ಅವರನ್ನು ಸೇರಿಸಿಕೊಂಡು ರಾಮಾಚಾರಿ ಹಾಗೂ ಚಾರುವಿನ ಬಗ್ಗೆ ಹರಟೆ ಹೊಡೆಯುತ್ತಿರುತ್ತಾನೆ.

ತನ್ನ ಸಿಬ್ಬಂದಿಯ ಮೇಲೆ ನಿಯಂತ್ರಣವೇ ಇಲ್ಲ. ಕನಿಷ್ಠ ಪಕ್ಷ ಅವನಿಗೆ ಮೇಲಧಿಕಾರಿಗಳ ಭಯವಾದರೂ ಇರಬೇಕಲ್ಲವೆ? ಚಿತ್ರದುರ್ಗ ಕೋಟೆಯಲ್ಲಿ ಆತ ಶರ್ಟ್, ಶೂಗಳನ್ನು ಒಂದು ಕೋಲಿಗೆ ಸಿಕ್ಕಿಸಿಕೊಂಡು ಓಡಾಡುವುದನ್ನು ಕಂಡಾಗ ಸರ್ಕಸ್ಸಿನ ಬಫೂನಿನಂತೆಯೇ ಕಾಣಿಸುತ್ತಾನೆ. ಧಾರಾವಾಹಿಯ ಕಥೆಗೆ ಯಾವ ವಿಧದಲ್ಲೂ ಪೂರಕವಾಗಿಲ್ಲದ ಈ ಪಾತ್ರದ ಔಚಿತ್ಯವೇನು?

—ಮುರಲೀಧರ ಕುಲಕರ್ಣಿ, ಬೀದರ್

ವಾರದ ಪತ್ರ

## ಅಯ್ಯೋ ರಾಮಾಚಾರಿ...

'ಬರ್ತಾ ಬರ್ತಾ ರಾಯರ ಕುದುರೆ...' ಅನ್ನೋ ಗಾದೆ 'ರಾಮಾಚಾರಿ'ಗೂ ಒಪ್ಪುತ್ತದೆ. ಕಥೆ ಸಂಸ್ಕೃತಿಯನ್ನು ಪ್ರತಿಧ್ವನಿಸುತ್ತದೆ ಎಂದು ಸಂತಸ ಪಡುವಷ್ಟರಲ್ಲೇ ಕಥೆ ಅಡ್ಡದಾರಿ ಹಿಡಿಯುತ್ತಿರುವುದು ವಿಷಾದಕರ.

ಅತ್ತಿಗೆಯ ಆಪರೇಷನಿಗೆ ಹಣ ಹೊಂದಿಸಲು ಕಲ್ಪನಾ ವಿಲಾಸ ಪ್ರಾಜೆಕ್ಟ್‌ಗಾಗಿ ಚಿತ್ರದುರ್ಗದ ಕೋಟೆಗೆ ಚಾರು ಮತ್ತು ರಾಮಾಚಾರಿ ಹೋಗುತ್ತಾರೆ. ಅಲ್ಲಿ ಚಾರು ಆಯತಪ್ಪಿ ಕಂದಕಕ್ಕೆ ಬೀಳುತ್ತಾಳೆ. ದಟ್ಟ ಕಾನನದ ನಡುವೆ ಹರಿಯುವ ನದಿ, ಪ್ರಪಾತ ಚಿತ್ರದುರ್ಗದ ಕೋಟೆಯಲ್ಲಿ ಎಲ್ಲಿದೆ? ಟಾರ್ಜನ್‌ನಂತೆ ಬಳ್ಳಿ ಹಿಡಿದು ಅವರು ನೇತಾಡುವ ದೃಶ್ಯವಂತೂ ಹಾಸ್ಯಾಸ್ಪದ. ಪಾತಾಳಕ್ಕೆ ಬಿದ್ದರೂ ಇಬ್ಬರಿಗೂ ಸಣ್ಣ ಗಾಯವೂ ಆಗದಿರುವುದು ದೊಡ್ಡ ಪವಾಡವೇ ಸರಿ. ಚಾರು ಅಲ್ಲಿಂದ ತನ್ನ ತಾಯಿಗೆ ಫೋನ್ ಮಾಡಿ ಹೆಲಿಕಾಪ್ಟರ್ ತರಿಸುತ್ತಾಳೆ. ಹೀಗೆ ಮುಂದುವರಿದರೆ ಧಾರಾವಾಹಿಯೂ ಪಾತಾಳ ಸೇರೀತು!

—ವಾ. ಮುರಳೀಧರ, ತೀರ್ಥಹಳ್ಳಿ

'ರಾಮಾಚಾರಿ'ಯ ಕೆಲವು ಹಾಸ್ಯ ಸನ್ನಿವೇಶಗಳನ್ನು ನೋಡಿದರೆ ತಲೆ ಕೆಟ್ಟುಹೋಗುತ್ತದೆ. ಅದರಲ್ಲಿ ಬಬ್ಲಿ ಪಾತ್ರದ ಹಾಸ್ಯ ಸನ್ನಿವೇಶಗಳು, ಅಸಂಬದ್ಧ ಮಾತು, ಅರ್ಥವಿಲ್ಲದ ವಿವರಣೆಗಳು ನೋಡಿದರೆ ಬೇಸರ ಬರುತ್ತದೆ. ಅವರು ಚಿತ್ರದುರ್ಗದ ಕೋಟೆಗೆ ಬಂದು 'ರಾಮಾಚಾರಿ, ಚಾರು ಎಲ್ಲಿದ್ದೀರಿ?' ಎಂದು ಹುಡುಕಾಡುತ್ತಾರೆ. ಮೊಬೈಲಿಗೆ ಕರೆ ಮಾಡಿ ಎಲ್ಲಿದ್ದೀರಿ ಎಂದು ಕೇಳಬಹುದಿತ್ತು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಪ್ರೇಕ್ಷಕರು ಮೂರ್ಖರೆ?

ಇತ್ತೀಚೆಗೆ ಕನ್ನಡ ಧಾರಾವಾಹಿಗಳನ್ನು ನೋಡುವ ನನಗೆ 'ಪ್ರೇಕ್ಷಕರು ಮೂರ್ಖರೆ' ಎಂದು ಅನ್ನಿಸತೊಡಗಿದೆ. ಪಾತ್ರಧಾರಿಗಳನ್ನು ಇದ್ದಕ್ಕಿದ್ದಂತೆ ಬದಲಿಸುವುದು, ಯಾರೂ ನಂಬಲಾಗದಂತಹ ಪ್ರಸಂಗಗಳನ್ನು ಅನಗತ್ಯವಾಗಿ ಸೃಷ್ಟಿಸುವುದು, ಪ್ರಧಾನ ಪಾತ್ರವನ್ನೇ ಬದಲಿಸುವ ಸಂದರ್ಭವನ್ನು ನೋಡಿದರೆ ಪ್ರೇಕ್ಷಕರನ್ನು ಯಾರೂ ಗಣನೆಗೆ ತೆಗೆದುಕೊಂಡಿಲ್ಲ ಎನ್ನುವುದು ಮೇಲು ನೋಟಕ್ಕೆ ಕಾಣಿಸುತ್ತದೆ.

ಟೀವಿಗಳಿಗೆ ಪ್ರೇಕ್ಷಕರು ಮುಖ್ಯವಾಗಬೇಕೇ ಹೊರತು ವೈಯುಕ್ತಿಕ ದ್ವೇಷ–ಅಸೂಯೆಗಳಾಗಲಿ, ಆರೋಪ–ಪ್ರತ್ಯಾರೋಪಗಳು ಮುಖ್ಯವಲ್ಲ. ಅವೆಲ್ಲ ಸಹಜವಾಗಿ ಇರುವಂತಹವೇ ಅಲ್ಲವೆ?

—ಪಂಕಜಾ ಎಸ್.ಆರ್., ಬೆಂಗಳೂರು

## ಸುದ್ದಿ ಜನಪರವಾಗಲಿ

ಕಿರುತೆರೆ ಸುದ್ದಿವಾಹಿನಿಗಳಿಗೆ ಏನಾಗಿದೆ? ಯಾವುದಕ್ಕೂ ಪ್ರಯೋಜನವಾಗದ ಸುದ್ದಿಗಳನ್ನೇ ಹೆಚ್ಚು ಪ್ರಸಾರ ಮಾಡುತ್ತಿವೆ. ನಟ–ನಟಿಯರು ಏನೇ ಮಾಡಿದರೂ ಸುದ್ದಿವಾಹಿನಿಗಳಿಗೆ ಸುದ್ದಿಯ ಸುಗ್ಗಿ. ಯಾರೊಬ್ಬರ ಖಾಸಗಿ ಜೀವನವನ್ನು ಸಾರ್ವಜನಿಕ ಮಾಡುವುದರಿಂದ ಯಾರಿಗೂ ಉಪಯೋಗವಿಲ್ಲ.

ಸುದ್ದಿಗೆ ಅಗತ್ಯದಷ್ಟು ಹೇಳಿದರೆ ಸಾಕು. ಸ್ವಾಮೀಜಿ ಒಬ್ಬರ ಲೈಂಗಿಕ ಹಗರಣವನ್ನು ಎಲ್ಲ ಮಾಧ್ಯಮಗಳು 24 ಗಂಟೆ ರುಬ್ಬಿವೆ. ಹೀಗಿರುವ ಟೀವಿಗಳಿಗೆ ಬೇರೆ ಹಗರಣ ಸಿಕ್ಕರೆ ಎಲ್ಲ ಮರೆತು, ಹೊಸದರ ಹಿಂದೆ ಓಡುತ್ತವೆ.

ಜನಪರವಾಗಿ ಯೋಚಿಸಿದರೆ ಜನಸಾಮಾನ್ಯರ ಸಮಸ್ಯೆಗಳು ಕಣ್ಣಿಗೆ ಕಾಣುತ್ತವೆ. ಬಡವರ ಪ್ರಮಾಣ ಹೆಚ್ಚಾಗುತ್ತಿದೆ. ರೋಗಿಗಳಿಗೆ ಸಮರ್ಪಕ ವೈದ್ಯಕೀಯ ಸೌಲಭ್ಯಗಳು ಇಲ್ಲ. ಔಷಧಗಳೂ ಕೈಗೆಟುಕುವ ದರದಲ್ಲಿ ಇಲ್ಲ. ಕೆಲ ಆಸ್ಪತ್ರೆ ಮತ್ತು ಔಷಧ ಕಂಪನಿಗಳು ಒಟ್ಟಾಗಿ ಔಷಧ ಮಾರುಕಟ್ಟೆಯನ್ನೇ ನಿಯಂತ್ರಿಸುತ್ತಿವೆ. ಆಗಾಗ ಇಂತಹ ಸುದ್ದಿಗಳನ್ನು ಮುದ್ರಣ ಮಾಧ್ಯಮದಲ್ಲಿ ನೋಡುತ್ತಿದ್ದೇವೆ. ದೃಶ್ಯ ಮಾಧ್ಯಮಗಳೂ ಈ ರೀತಿಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಜನೋಪಯೋಗಿ ಆಗಲಿ.

—ಶಿವಕುಮಾರ ಕೊ. ಬಣಗಾರ, ಬಾಗಲಕೋಟೆ

## ಭ್ರಮೆಗಳ ಬಲೂನುಗಳು!

ಕನ್ನಡ ಧಾರಾವಾಹಿಗಳು ಪ್ರಾರಂಭದಲ್ಲಿ ಕುತೂಹಲ ಹುಟ್ಟಿಸಿದರೂ ಮುಂದುವರಿದಂತೆ ಅದಕ್ಕೆಲ್ಲ ಇತಿಶ್ರೀ ಹಾಡುವುದರಿಂದ ಇಷ್ಟೇನಾ ಅನ್ನಿಸಿ ಬಿಡುತ್ತವೆ. ಬಹುಪಾಲು ಧಾರಾವಾಹಿಗಳ ಕಥೆ ವಿಭಿನ್ನ ಎನ್ನುವಂತೆ ಕಂಡರೂ ಅಲ್ಲಿ ನಡೆಯುವ ವಿದ್ಯಮಾನಗಳು ಹೆಚ್ಚು ಕಡಿಮೆ ಒಂದೇ ರೀತಿ ಇರುತ್ತವೆ. ಧಾರಾವಾಹಿಗಳ ಉದ್ದಕ್ಕೂ ದ್ವೇಷಾಸೂಯೆಗೆ ಹೆಚ್ಚಿನ ಆದ್ಯತೆ ನೀಡುವುದು ಸಾಮಾನ್ಯ.

ಮದುವೆಯನ್ನು ವೈಭವೀಕರಿಸುವುದು, ಮಧ್ಯದಲ್ಲಿ ದರ್ಪ ದೌರ್ಜನ್ಯಕ್ಕೆ ಮೇಲ್ಪಂಕ್ತಿ ಹಾಕಿ ಇದೆಲ್ಲ ಜೀವನದಲ್ಲಿ ಇರಲೇಬೇಕೆಂಬ ಭ್ರಮೆ ಹುಟ್ಟಿಸುತ್ತಿದ್ದಾರೆ. ಬದುಕು ನಾಗಾಲೋಟದಲ್ಲಿ ಸಾಗುತ್ತಿರುವ ಈ ಹೊತ್ತಿನಲ್ಲಿ ಎಂದೂ ಬದುಕಲ್ಲಿ ಘಟಿಸದ ವಿಷಯಗಳನ್ನು ವೈಭವೀಕರಿಸುವುದು ಕೆಟ್ಟ ಸಂಪ್ರದಾಯ.

—ಶಂಕರೇಗೌಡ ತುಂಬಕೆರೆ, ಮಂಡ್ಯ